# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು–570006

ಪ್ರಸಾರಾಂಗ ವಿಭಾಗ


## ಕಚೇರಿ ಆದೇಶ

**ವಿಷಯ:** ಪ್ರಸಾರಾಂಗದ ವತಿಯಿಂದ ಹೊರ ತರುವ ಸುದ್ದಿಪತ್ರಿಕೆಯ ಮೂರನೇ ಸಂಚಿಕೆಯ ಪುಟಗಳನ್ನು ಲೇಔಟ್/ಡಿಸೈನ್ ಮಾಡಿಸುವುದಕ್ಕೆ ಹುಂಡಿ ಪಾವತಿಸುವ ಬಗೆಗೆ.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ: 04.01.2023

*****

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಸಾರಾಂಗ ವಿಭಾಗದ ವತಿಯಿಂದ ಪ್ರತಿ ಎರಡು ತಿಂಗಳಿಗೆ ಒಮ್ಮೆ ಸುದ್ದಿಪತ್ರಿಕೆಯನ್ನು (News Letter) ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸುವ ಸಲುವಾಗಿ ಯೋಜನೆ ರೂಪಿಸಲಾಗಿದ್ದು, 2022 ನೇ ನವೆಂಬರ್ ಮತ್ತು ಡಿಸೆಂಬರ್ ತಿಂಗಳ ಸುದ್ದಿಪತ್ರಿಕೆಯ ಸಂಚಿಕೆ ಪುಟಗಳನ್ನು ಲೇಔಟ್/ಡಿಸೈನ್ ಮಾಡಿ ಸಿದ್ಧಪಡಿಸುವ ಸಂಬಂಧ ತಗುಲುವ ವೆಚ್ಚವನ್ನು ಪಾವತಿಸಬೇಕಾಗಿರುವ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳು ರೂ. 5000/– (ಐದು ಸಾವಿರಗಳು ಮಾತ್ರ)ಗಳನ್ನು ಎ.ಸಿ ಹುಂಡಿಯನ್ನು ಸಲ್ಲಿಸಿ ವೆಚ್ಚ ಭರಿಸುವ ಬಗ್ಗೆ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಈ ಕಚೇರಿ ಆದೇಶ ಹೊರಡಿಸಲಾಗಿದೆ.

**ಕಚೇರಿ ಆದೇಶ ಸಂಖ್ಯೆ : ಕರಾಮುವಿ/ಪ್ರವಿ/01/60/2022–23, ದಿನಾಂಕ :10.01.2023**

ಮೇಲಿನ ಪ್ರಸ್ತಾವನೆಗೊಳಪಟ್ಟು, ಪ್ರಸಾರಾಂಗ ವಿಭಾಗದ ವತಿಯಿಂದ ಪ್ರತಿ ಎರಡು ತಿಂಗಳಿಗೆ ಒಮ್ಮೆ ಸುದ್ದಿಪತ್ರಿಕೆಯನ್ನು (News Letter) ಪ್ರಕಟಿಸುವ ಸಂಬಂಧ ಸುದ್ದಿಪತ್ರಿಕೆಯ ಸಂಚಿಕೆ ಪುಟಗಳನ್ನು ಸಿದ್ಧಪಡಿಸಲು ತಗಲುವ ವೆಚ್ಚವನ್ನು ಪಾವತಿಸಲು ಮಾನ್ಯ ಕುಲಪತಿಗಳು ಉಲ್ಲೇಖಿತ ರೀತ್ಯ ರೂ.5000/– (ಐದು ಸಾವಿರಗಳು ಮಾತ್ರ)ಗಳನ್ನು ಎ.ಸಿ ಹುಂಡಿಯನ್ನು ಸಲ್ಲಿಸಿ ವೆಚ್ಚ ಭರಿಸುವ ಬಗ್ಗೆ ಅನುಮೋದನೆ ನೀಡಿರುವ ಹಿನ್ನಲೆಯಲ್ಲಿ ಈ ಸಂಬಂಧ ವೆಚ್ಚವನ್ನು ಪಾವತಿಸಲು ಆದೇಶ ಹೊರಡಿಸಲಾಗಿದೆ.

ಸದರಿ ಕಾರ್ಯಕ್ಕೆ ತಗುಲುವ ವೆಚ್ಚವನ್ನು ನಿಯಾಮಾನುಸಾರ ಲೆಕ್ಕ ಶೀರ್ಷಿಕೆ 026–316ಯಿಂದ ಭರಿಸುವುದು ಹಾಗೂ ಸದರಿ ವೆಚ್ಚಕ್ಕೆ ಹೊಂದಾಣಿಕೆ ಹುಂಡಿಯನ್ನು ಮೂವತ್ತು ದಿನಗಳ ಒಳಗಾಗಿ ಸಲ್ಲಿಸುವುದು.

12/01/2023

ಕುಲಸಚಿವರು

ಗೆ,

ಹಣಕಾಸು ಅಧಿಕಾರಿ ಕರಾಮುವಿ, ಮೈಸೂರು.

ಪ್ರತಿ:

1. ವಿಶೇಷ ಕರ್ತವ್ಯಾಧಿಕಾರಿಗಳು, ಮಾನ್ಯ ಕುಲಪತಿಗಳ ಕಾರ್ಯಾಲಯ, ಕರಾಮುವಿ.
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ.
3. ಕಚೇರಿ ಪ್ರತಿ, ಸಂಬಂಧಿಸಿದ ಕಡತಕ್ಕೆ.